**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ231/2020 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **18.11.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ **ಸಿ.ಟಿ.ಬಿ** ವಕೀಲರಿಂದಃ

ದಾವಾ ಆಸ್ತಿಯನ್ನು ನಿಮ್ಮ ತಂದೆ ಅಥವಾ ತಾತ ಖರೀದಿ ಮಾಡಿರುತ್ತಾರ ಎಂದರೆ ಸಾಕ್ಷಿಯು ಸುಮಾರು ಹತ್ತು ತಲೆಮಾರುಗಳಿಂದ ನಮ್ಮ ಸ್ವಾದೀನದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಮೂಲಕ್ರಯಪತ್ರ ಇರುವುದಿಲ್ಲ. ಸದರಿ ಆಸ್ತಿಯನ್ನು ಯಾರಿಂದ ಖರೀದಿ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಪೂರ್ವ-ಪಶ್ಚಿಮ **58** ಅಡಿ, ಉತ್ತರ-ದಕ್ಷಿಣ **34** ಅಡಿ ಇರುತ್ತದೆ. ದಾವಾ ಆಸ್ತಿ ಸದರಿ ವಿಸ್ತೀರ್ಣ ಇರುವ ಬಾಬ್ತು ಪುರಸಭೆಯಿಂದ ಅಳತೆ ಪಟ್ಟಿಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ಮನೆಯನ್ನು ಯಾವಾಗ ನಿರ್ಮಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು **1968** ರಲ್ಲಿ ಪ್ರಾರಂಭ ಮಾಡಿ **1969** ರಲ್ಲಿ ಮುಕ್ತಾಯ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಮನೆ ಕಟ್ಟುವ ಬಾಬ್ತು ನಾನು ಪುರಸಭೆಯಿಂದ ಕಟ್ಟಡ ಕಟ್ಟುವ ಪರವಾನಿಗೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ದಾವಾ ಆಸ್ತಿಯ ಬಾಬ್ತು ಅಸೆಸ್ಮೆಂಟ್ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಸದರಿ ದಾಖಲೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಋಣಭಾರ ರಾಹಿತ್ಯ ಪತ್ರ ಹಾಜರುಪಡಿಸಲು ತೊಂದರೆ ಇರುತ್ತದೆಯೇ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಮನೆ ಕಟ್ಟಿದ್ದ ಬಾಬ್ತು ಅನುಮೋದನೆಗೊಂಡ ನೀಲಿ ನಕ್ಷೆ ಇರುತ್ತದೆ, ಸದರಿ ದಾಖಲೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಪುರಸಭೆಯಿಂದ ದಾವಾ ಆಸ್ತಿಗೆ ಸಂಬಂಧಿಸಿದ NOC ದೃಡೀಕರಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ. ವಿದ್ಯುತ್ ನಿಗಮದಿಂದ ಮನೆಗೆ ವಿದ್ಯುತ ಸಂಪರ್ಕ ಪಡೆದ ಬಾಬ್ತು ದಾಖಲೆಗಳು

ಇರುವುದಿಲ್ಲ.

ದಾವಾ ಆಸ್ತಿಯನ್ನು ನಾನು ಮೊಗಾಳೆ ಗೌಡ ರವರ ಪೌತಿ ಮಗ ಜವನಯ್ಯನ ಪೌತಿ ಮಗ ತಮ್ಮಯ್ಯರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿಯವರಿಂದ ಪೂರ್ವ-ಪಶ್ಚಿಮ 40 ಅಡಿ ಹಾಗೂ ಉತ್ತರ-ದಕ್ಷಿಣ 26 ಅಡಿ ಜಾಗದಲ್ಲಿ ಅರ್ಧ ಭಾಗದ ಜಾಗವನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಾನು 1982 ರಲ್ಲಿ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಮುಂಭಾಗದಲ್ಲಿ ಸಾರ್ವಜನಿಕ ಸ್ಥಳದಲ್ಲಿ ನೀರಿನ ಸಂಪ್ಪನ್ನು ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾರ್ವಜನಿಕ ಸ್ಥಳವನ್ನು ಅತಿಕ್ರಮಣ ಮಾಡಿಕೊಂಡು ನೀರಿನ ಸಂಪ್ಪನ್ನು ನಿರ್ಮಿಸಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಗೆ ಸೇರಿದ ಪೂರ್ವ-ಪಶ್ಚಿಮ 18 ಅಡಿ ಹಾಗೂ ಉತ್ತರ-ದಕ್ಷಿಣ 12 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾರ್ವಜನಿಕ ಸ್ಥಳವನ್ನು ಅತಿಕ್ರಮಣ ಮಾಡಿಕೊಂಡು, ಮನೆಯನ್ನು ಕಟ್ಟಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯು ಪೂರ್ವ-ಪಶ್ಚಿಮ 58 ಅಡಿ ಹಾಗೂ ಉತ್ತರ-ದಕ್ಷಿಣ 34 ಅಡಿ ವಿಸ್ತೀರ್ಣ ಇರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**